2018 – '19

ವಾರ್ಷಿಕ ವರದಿ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ
'ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ',
ಮೇ. ಸಂದೀಪ್ ಉನ್ನೀಕೃಷ್ಣನ್ ರಸ್ತೆ, ದೊಡ್ಡ ಬೆಟ್ಟಹಳ್ಳಿ ಬಡಾವಣೆ
ಬಸ್ ನಿಲ್ದಾಣದ ಹತ್ತಿರ, ವಿದ್ಯಾರಣ್ಯಪುರ ಅಂಚೆ,
ಬೆಂಗಳೂರು – 560 097

ವಿ–ಅಂಚೆ : ksta.gok@gmail.com

ಜಾಲತಾಣ : www.kstacademy.in

ಪರಿವಿಡಿ

1. ವಿಜ್ಞಾನ ಲೋಕ ಪ್ರಕಟಣೆ 2

2. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ 3

3. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಧಾನ ಸಮ್ಮೇಳನ 4

4. ಅಕಾಡೆಮಿ ಜೀವಮಾನ ಸಾಧನೆ ಪ್ರಶಸ್ತಿ 7

5. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂದಿಸಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆ 7

6. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ ವಿಶೇಷ ಕಾರ್ಯಾಗಾರ 9

7. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳು 13

8. ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳು 13

9. ವಿಶೇಷ ಚೇತನರಿಗೆ ವಿಜ್ಞಾನ ಕಾರ್ಯಕ್ರಮಗಳು 16

10. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ವೈಜ್ಞಾನಿಕ ಮಾದರಿಗಳ ವಸ್ತು ಪ್ರದರ್ಶನ ಸ್ಪರ್ಧೆ 17

11. ಮುಕ್ತ ಉಪನ್ಯಾಸ ಮಾಲೆ ಕಾರ್ಯಕ್ರಮ 18

12. ಪದವಿ ಪೂರ್ವ ವಿಜ್ಞಾನ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕನ್ನಡ ಪದಕೋಶ 19

13. ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ (ಗಾಲಿಗಳ ಮೇಲೆ ವಿಜ್ಞಾನ) 20

14. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ನೂತನ ಕಟ್ಟಡದ ಉದ್ಘಾಟನೆ 20

15. ವಿಜ್ಞಾನ, ತಂತ್ರಜ್ಞಾನ, ಕೃಷಿ & ವೈದ್ಯಕೀಯ ವಿಷಯಗಳ ಶ್ರೇಷ್ಠ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿ 22

ಸಂಪರ್ಕಿಸಬೇಕಾದ ವಿಳಾಸ: 22

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು (ಕವಿತಂಅ) ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಪದ್ಮ ವಿಭೂಷಣ ಪುರಸ್ಕೃತ ದಿವಂಗತ ಪ್ರೊ. ಯು. ಆರ್. ರಾವ್, ನಿವೃತ್ತ ಅಧ್ಯಕ್ಷರು, ಇಸ್ರೋ/ಕಾರ್ಯದರ್ಶಿ, ಬಾಹ್ಯಾಕಾಶ ಇಲಾಖೆ, ಭಾರತ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ 2005ರ ಜುಲೈನಲ್ಲಿ ಸ್ಥಾಪಿಸಲಾಗಿದೆ. ಪ್ರಸ್ತುತ ಪದ್ಮಶ್ರೀ ಡಾ. ಎಸ್. ಕೆ. ಶಿವಕುಮಾರ್, ನಿವೃತ್ತ ನಿರ್ದೇಶಕರು, ಯು. ಆರ್. ರಾವ್ ಸೆಟಲೈಟ್ ಸೆಂಟರ್ (ISAC) ಇವರು ಅಧ್ಯಕ್ಷರಾಗಿದ್ದಾರೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ತಾಂತ್ರಿಕ ನಿರ್ದೇಶಕರಾದ ಡಾ. ಹೆಚ್. ಹೊನ್ನೇಗೌಡರವರು ಅಕಾಡೆಮಿಯ ಸದಸ್ಯ ಕಾರ್ಯದರ್ಶಿಗಳಾಗಿದ್ದಾರೆ. 2018–'19ನೇ ಸಾಲಿನಲ್ಲಿ ಅಕಾಡೆಮಿಯು ರಾಜ್ಯಾದ್ಯಂತ ಯಶಸ್ವಿಯಾಗಿ ಆಯೋಜಿಸಲಾದ ಪ್ರಮುಖ ಕಾರ್ಯಕ್ರಮಗಳ ವಿವರ ಕೆಳಕಂಡಂತಿದೆ:

1. ವಿಜ್ಞಾನ ಲೋಕ ಪ್ರಕಟಣೆ

ಅಕಾಡೆಮಿಯು 'ವಿಜ್ಞಾನ ಲೋಕ' ಎಂಬ ದ್ವೈಮಾಸಿಕ ಸಂಚಿಕೆಯನ್ನು 2007 ರಿಂದ ನಿರಂತರವಾಗಿ ಪ್ರಕಟಿಸುತ್ತಿದೆ. 2018–'19ನೇ ಸಾಲಿನಲ್ಲಿ 6 ಸಂಚಿಕೆಗಳನ್ನು 2018ರ ಮೇ, ಜುಲೈ, ಸೆಪ್ಟೆಂಬರ್ & ನವೆಂಬರ್ ಹಾಗೂ 2019ರ ಜನವರಿ & ಮಾರ್ಚ್ ಮಾಹೆಗಳಲ್ಲಿ ಪ್ರಕಟಿಸಲಾಗಿದೆ. ಪ್ರತಿ ಸಂಚಿಕೆಯ ತಲಾ 2000 ಪ್ರತಿಗಳನ್ನು ಮುದ್ರಿಸಿ, ರಾಜ್ಯದ ವಿವಿಧ ವಿಜ್ಞಾನ ಪದವಿ ಪೂರ್ವ ಮತ್ತು ವಿಜ್ಞಾನ ಪದವಿ ಕಾಲೇಜು, ವಿಜ್ಞಾನ ಕೇಂದ್ರಗಳು, ಗ್ರಂಥಾಲಯಗಳಿಗೆ ಮತ್ತು ಇನ್ನಿತರೆ ಸಂಘ ಸಂಸ್ಥೆಗಳಿಗೆ ಉಚಿತವಾಗಿ ವಿತರಿಸಲಾಗಿದೆ.

ಚಿತ್ರ 1: 2018–'19ನೇ ಸಾಲಿನಲ್ಲಿ ಪ್ರಕಟಿಸಲಾದ ವಿಜ್ಞಾನ ಲೋಕ ದ್ವೈಮಾಸಿಕದ ಸಂಚಿಕೆಗಳು

2. ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ದ್ವಿತೀಯ ಕನ್ನಡ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು "ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನೆ – ಕರ್ನಾಟಕದ ಕೊಡುಗೆ" ಎಂಬ ಕೇಂದ್ರ ವಿಷಯದ ಮೇಲೆ 2018ರ ನವೆಂಬರ್ 23 ಮತ್ತು 24 ರಂದು ಕರ್ನಾಟಕ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಧಾರವಾಡದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ರಾಜ್ಯ ಮಟ್ಟದ ವಿಜ್ಞಾನ ಮತ್ತು ತಂತ್ರಜ್ಞಾನ ಕನ್ನಡ ಸಮ್ಮೇಳನವನ್ನು 2018ರ ನವೆಂಬರ್ 23 ರಂದು ವಿಧಾನ ಪರಿಷತ್ತಿನ ಮಾನ್ಯ ಸಭಾಪತಿಗಳಾದ ಶ್ರೀ ಎಸ್. ಬಸವರಾಜ ಹೊರಟ್ಟಿರವರು ಉದ್ಘಾಟಿಸಿ ಚಾಲನೆ ನೀಡಿದರು. ಭಾರತೀಯ ಬಾಹ್ಯಾಕಾಶ ಸಂಸ್ಥೆಯ ನಿವೃತ್ತ ಅಧ್ಯಕ್ಷರು ಹಾಗೂ ಪದ್ಮಶ್ರೀ ಪುರಸ್ಕೃತರಾದ ಶ್ರೀ ಎ. ಎಸ್. ಕಿರಣ್ ಕುಮಾರ್‌ರವರು ಪ್ರಧಾನ ಭಾಷಣ ಮಾಡಿದರು. ಧಾರವಾಡ ಲೋಕಸಭಾ ಕ್ಷೇತ್ರದ ಮಾನ್ಯ ಸದಸ್ಯರಾದ ಶ್ರೀ ಪ್ರಹ್ಲಾದ್ ಜೋಶಿರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷರು ಮತ್ತು ಯು. ಆರ್. ರಾವ್ ಉಪಗ್ರಹ ಕೇಂದ್ರದ ನಿವೃತ್ತ ನಿರ್ದೇಶಕರಾದ ಪದ್ಮಶ್ರೀ ಪುರಸ್ಕೃತ ಡಾ. ಎಸ್. ಕೆ. ಶಿವಕುಮಾರ್‌ರವರು ಸಮಾರಂಭದ ಗೌರವಾನ್ವಿತ ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಪ್ರಮೋದ ಗಾಯಿರವರು ವಹಿಸಿದ್ದರು. ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಎ. ಎಂ. ರಮೇಶ್ ರವರು ಗಣ್ಯರನ್ನು ಮತ್ತು ಅತಿಥಿಗಳನ್ನು ಸ್ವಾಗತಿಸಿದರು. ಸಮ್ಮೇಳನ ಕಾರ್ಯಕ್ರಮದ ಪರಿಚಯವನ್ನು ಧಾರವಾಡದ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕರಾದ ಡಾ. ಕೆ. ಬಿ. ಗುಡಸಿ ರವರು ನಡೆಸಿಕೊಟ್ಟರು. ವಿಶ್ವವಿದ್ಯಾನಿಲಯದ ಕುಲಸಚಿವರಾದ ಪ್ರೊ. ಕೆ. ಎಂ. ಹೊಸಮನಿರವರು ವಂದಿಸಿದರು.

ಚಿತ್ರ 2: ಸಮ್ಮೇಳನದ ಉದ್ಘಾಟನಾ ಸಮಾರಂಭ

ಸಮ್ಮೇಳನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟು 600 ಪ್ರತಿನಿಧಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಭೌತ ವಿಜ್ಞಾನ, ರಸಾಯನ ಮತ್ತು ಜೀವ ವಿಜ್ಞಾನಗಳಿಗೆ ಸಂಬಂಧಿಸಿದ ಸುಮಾರು 100 ಕ್ಕೂ ಹೆಚ್ಚು ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು (Poster Presentation) ಮಂಡಿಸಲಾಯಿತು. ತಜ್ಞ ಸಮಿತಿಯು ಆಯ್ಕೆ ಮಾಡಿದ ಅತ್ಯುತ್ತಮವಾದ 4 ಪ್ರಾತ್ಯಕ್ಷಿಕೆಗಳಿಗೆ ಬಹುಮಾನಗಳನ್ನು (ಪ್ರಥಮ – ರೂ. 10,000/–; ದ್ವಿತೀಯ – ರೂ. 7,500/– ತೃತೀಯ ರೂ. 5,000/– ಹಾಗೂ ಸಮಾಧಾನಕರ ಬಹಮಾನಗಳನ್ನು ರೂ. 3,000/–) ನೀಡಲಾಯಿತು.

ಕನ್ನಡದಲ್ಲಿ ವಿಜ್ಞಾನ ಪ್ರಸರಣ ಮತ್ತು ಸಂವಹನಕ್ಕೆ ಅನನ್ಯ ಕೊಡುಗೆಯನ್ನು ನೀಡಿರುವ ಖ್ಯಾತ ವಿಜ್ಞಾನ ಲೇಖಕರು ಹಾಗೂ ಆಕಾಶವಾಣಿಯ ನಿವೃತ್ತ ಹೆಚ್ಚುವರಿ ಮಹಾ ನಿರ್ದೇಶಕರಾದ ಡಾ. ಹೆಚ್. ಆರ್. ಕೃಷ್ಣಮೂರ್ತಿ ರವರಿಗೆ "ಜೀವಮಾನ ಸಾಧನೆ ಪ್ರಶಸ್ತಿಯನ್ನು" ನೀಡಿ ಸನ್ಮಾನಿಸಲಾಯಿತು. ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಶ್ರೀಯುತರಿಗೆ ರೂ. ೫೦.೦೦ ಸಾವಿರಗಳ ನಗದು ಹಾಗೂ ಸನ್ಮಾನ ಪತ್ರವನ್ನು ನೀಡಿ ಗೌರವಿಸಲಾಯಿತು.

೩. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಧಾನ ಸಮ್ಮೇಳನ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಹನ್ನೊಂದನೇ ವಾರ್ಷಿಕ ಸಮ್ಮೇಳನವನ್ನು "ಸಮಾನ ಒಳಿತಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನದ ಹೊಸ ಆಯಾಮಗಳು" ಎಂಬ ಕೇಂದ್ರ ವಿಷಯದಡಿ ಬೆಂಗಳೂರಿನ ಎನ್. ಎಂ. ಕೆ. ಆರ್. ವಿ. ಮಹಿಳಾ ಕಾಲೇಜಿನ ಸಹಯೋಗದೊಂದಿಗೆ ಎರಡು ದಿನಗಳ ಕಾಲ ಬೆಂಗಳೂರಿನಲ್ಲಿ 2019ರ ಫೆಬ್ರವರಿ 1 ಮತ್ತು 2 ರಂದು ಯಶಸ್ವಿಯಾಗಿ ಆಯೋಜಿಸಲಾಯಿತು.

ಈ ಸಮ್ಮೇಳನವನ್ನು 2019ರ ಫೆಬ್ರವರಿ 1 ರಂದು ಕರ್ನಾಟಕ ಸರ್ಕಾರದ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ ರವರು ಉದ್ಘಾಟಿಸಿ, ಚಾಲನೆ ನೀಡಿದರು. ಸಮಾರಂಭದ ಅಧ್ಯಕ್ಷತೆಯನ್ನು ಆರ್. ಎಸ್. ಎಸ್. ಟಿ. ಟ್ರಸ್ಟಿಗಳಾದ ಡಾ. ಎಂ. ಎಸ್. ಪ್ರಕಾಶ್ ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಮಾಜಿ ಸಚಿವರು ಹಾಗೂ ಹಿರಿಯ ಶಿಕ್ಷಣ ತಜ್ಞರಾದ ಪ್ರೊ. ಬಿ. ಕೆ. ಚಂದ್ರಶೇಖರ್‌ರವರು ಭಾಗವಹಿಸಿದ್ದರು. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎ. ಎಂ. ರಮೇಶ್‌ರವರು ಕಾರ್ಯಕ್ರಮದ ಪರಿಚಯ ಮಾಡಿಕೊಟ್ಟು ಗಣ್ಯರನ್ನು ಸ್ವಾಗತಿಸಿದರೆ, ಎನ್. ಎಂ. ಕೆ. ಆರ್. ವಿ. ಕಾಲೇಜಿನ ಪ್ರಾಂಶುಪಾಲರಾದ ಡಾ. ಸ್ನೇಹಲತಾ ನಾಡಿಗೇರ್‌ರವರು ವಂದಿಸಿದರು.

ಸಮ್ಮೇಳನದ ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಅಕಾಡೆಮಿ ಅಧ್ಯಕ್ಷರಾದ ಡಾ. ಎಸ್. ಕೆ. ಶಿವಕುಮಾರ್‌ರವರು ವಹಿಸಿದ್ದು, ಆರ್. ಆರ್. ಎಸ್. ಟಿ. ಟ್ರಸ್ಟಿ & ಎನ್. ಎಂ. ಕೆ. ಆರ್. ವಿ. ಮಹಿಳಾ ಕಾಲೇಜಿನ ಆಡಳಿತ ಮಂಡಳಿ ಅಧ್ಯಕ್ಷರಾದ ಶ್ರೀ ಎಂ. ಕೆ. ದತ್ತರಾಜ್‌ರವರು ಸಮಾರೋಪ ಭಾಷಣವನ್ನು ಮಾಡಿದರು. ಬೇಸ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ನಿರ್ದೇಶಕರು ಮತ್ತು ಅಕಾಡೆಮಿ ಸದಸ್ಯರಾದ ಡಾ. ಹೆಚ್. ಎಸ್. ನಾಗರಾಜರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು. ವಿವಿಧ ವಿಷಯಗಳ ಪ್ರಾತ್ಯಕ್ಷಿಕೆ ಪ್ರದರ್ಶನ ಸ್ಪರ್ಧೆಯಲ್ಲಿ ವಿಜೇತರಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ತಾಂತ್ರಿಕ ನಿರ್ದೇಶಕರು ಮತ್ತು ಅಕಾಡೆಮಿಯ ಸದಸ್ಯ ಕಾರ್ಯದರ್ಶಿಗಳಾದ ಡಾ. ಹೆಚ್. ಹೊನ್ನೇಗೌಡರವರು ಬಹುಮಾನ ಮತ್ತು ಪ್ರಶಸ್ತಿ ಪತ್ರಗಳನ್ನು ವಿತರಿಸಿದರು.

ಚಿತ್ರ ೩: ಹನ್ನೊಂದನೇ ವಾರ್ಷಿಕ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಸಮ್ಮೇಳನದ ತಾಂತ್ರಿಕ ಅಧಿವೇಶನದಲ್ಲಿ ಖ್ಯಾತ ವಿಜ್ಞಾನಿಗಳು, ತಂತ್ರಜ್ಞಾನಿಗಳು ಮತ್ತು ಪ್ರಖ್ಯಾತ ಶಿಕ್ಷಣತಜ್ಞರಿಂದ ಎಂಟು ಶ್ರೇಷ್ಠ ಉಪನ್ಯಾಸಗಳನ್ನು ಏರ್ಪಡಿಸಲಾಗಿತ್ತು. ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಮತ್ತು ಕಾಲೇಜುಗಳ ಬೋಧಕರು, ವಿಜ್ಞಾನ ಪದವಿ ಮತ್ತು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು, ವಿಜ್ಞಾನ ಬರಹಗಾರರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಸರ್ಕಾರದ ಸ್ವಾಯತ್ತ ಸಂಸ್ಥೆಗಳ ಪ್ರತಿನಿಧಿಗಳು ಸೇರಿದಂತೆ ಸುಮಾರು 1000 ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಚಿತ್ರ 4: ಹನ್ನೊಂದನೇ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನದಲ್ಲಿ ವಿವಿಧ ಸಂಸ್ಥೆಗಳ ವಸ್ತು ಪ್ರದರ್ಶನ ಮಳಿಗೆಗಳು

ಭೌತ ಮತ್ತು ಗಣಿತ ವಿಜ್ಞಾನ, ರಸಾಯನ ಮತ್ತು ಜೀವ ವಿಜ್ಞಾನ, ಇಂಜಿನಿಯರಿಂಗ್ ಹಾಗೂ ಅಂತರ್ ಶಾಸ್ತ್ರೀಯ ವಿಜ್ಞಾನಗಳಿಗೆ ಸಂಬಂಧಿಸಿದ ಸುಮಾರು 200 ಕ್ಕೂ ಹೆಚ್ಚು ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು (Poster Presentation) ಮಂಡಿಸಲಾಯಿತು. ಪ್ರತಿ ವಿಷಯದಲ್ಲಿ ತಜ್ಞ ಸಮಿತಿಯು ಆಯ್ಕೆ ಮಾಡಿದ ಅತ್ಯುತ್ತಮವಾದ 4 ಪ್ರಾತ್ಯಕ್ಷಿಕೆಗಳಿಗೆ ಬಹುಮಾನಗಳನ್ನು (ಪ್ರಥಮ – ರೂ. 10,000/–; ದ್ವಿತೀಯ – ರೂ. 7,500/– ಹಾಗೂ 2 ಸಮಾಧಾನಕರ ಬಹಮಾನಗಳನ್ನು ತಲಾ ರೂ. 5,000/–) ನೀಡಲಾಯಿತು.

ಚಿತ್ರ 5: ಸಂಶೋಧನಾ ಪ್ರಾತ್ಯಕ್ಷಿಕೆಗಳ ಪ್ರದರ್ಶನ

4. ಅಕಾಡೆಮಿ ಜೀವಮಾನ ಸಾಧನೆ ಪ್ರಶಸ್ತಿ

ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಶ್ರೇಷ್ಠ ಸಾಧನೆ ಮಾಡಿರುವ ಹಾಗೂ ನಮ್ಮ ರಾಷ್ಟ್ರದಲ್ಲಿ ಅವುಗಳ ಬೆಳವಣಿಗೆಗೆ ಅನನ್ಯ ಕೊಡುಗೆ ನೀಡಿರುವ ರಾಜ್ಯದ ಶ್ರೇಷ್ಠ ವಿಜ್ಞಾನಿಯೊಬ್ಬರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಿಕೊಂಡು ಬರಲಾಗುತ್ತಿದ್ದು, ಹನ್ನೊಂದನೇ ಸಮ್ಮೇಳನದಲ್ಲಿ ವಿಜ್ಞಾನ

ಚಿತ್ರ 6: ಅಕಾಡೆಮಿಯ ಜೀವಮಾನ ಸಾಧನೆ ಪ್ರಶಸ್ತಿಯನ್ನು ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಡಾ. ಬಿ. ವಿ. ಶ್ರೀಕಂಠನ್‌ರವರಿಗೆ ಪ್ರದಾನ

ಮತ್ತು ತಂತ್ರಜ್ಞಾನ ಕ್ಷೇತ್ರಕ್ಕೆ ಅನನ್ಯ ಕೊಡುಗೆ ನೀಡಿರುವ ಖ್ಯಾತ ವಿಜ್ಞಾನಿ ಹಾಗೂ ಮುಂಬೈಯಿನ ಟಾಟಾ ಇನ್ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್ ಸಂಸ್ಥೆಯ ನಿವೃತ್ತ ನಿರ್ದೇಶಕರಾದ ಪದ್ಮಭೂಷಣ ಪ್ರಶಸ್ತಿ ಪುರಸ್ಕೃತರಾದ ಡಾ. ಬಿ. ವಿ. ಶ್ರೀಕಂಠನ್ ರವರಿಗೆ ಈ ಪ್ರಶಸ್ತಿಯನ್ನು ಪ್ರದಾನ ಮಾಡಲಾಯಿತು. 11ನೇ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಶ್ರೀಯುತರಿಗೆ ರೂ. 1.00 ಲಕ್ಷಗಳ ನಗದು, ಚಿನ್ನದ ಪದಕ ಹಾಗೂ ಸನ್ಮಾನ ಪತ್ರವನ್ನು ನೀಡಿ ಸನ್ಮಾನಿಸಲಾಯಿತು.

5. ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆ

ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸುವ, ವೈಜ್ಞಾನಿಕ ಚಿಂತನೆ ಮತ್ತು ಸೃಜನಶೀಲತೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವ, ಪ್ರಚಲಿತ ವೈಜ್ಞಾನಿಕ ವಿದ್ಯಮಾನಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವ ಉದ್ದೇಶದಿಂದ ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿವಿಧ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆಗಳನ್ನು ಆಯೋಜಿಸಲಾಗಿತ್ತು. ಪ್ರತಿ ಕಾರ್ಯಕ್ರಮದಲ್ಲಿ ಕೇಂದ್ರ ವಿಷಯಕ್ಕೆ ಸಂಬಂಧಿಸಿದ ಎರಡು ವಿಶೇಷ ಉಪನ್ಯಾಸಗಳನ್ನು ಹಾಗೂ ವಿದ್ಯಾರ್ಥಿಗಳಿಗೆ ಪ್ರಬಂಧ (ಕನ್ನಡ & ಇಂಗ್ಲಿಷ್) ಸ್ಪರ್ಧೆ, ಮಾದರಿ ತಯಾರಿಕೆ, ರಸಪ್ರಶ್ನೆ ಮುಂತಾದ ಸ್ಪರ್ಧೆಗಳನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನ ಹಾಗೂ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು. 2018–'19ನೇ ಸಾಲಿನಲ್ಲಿ ಒಟ್ಟು 7 ಕಾರ್ಯಕ್ರಮಗಳನ್ನು ಅಕಾಡೆಮಿಯ ಕಛೇರಿಯಲ್ಲಿ ಹಾಗೂ ವಿವಿಧ ಕಾಲೇಜುಗಳ ಸಹಯೋಗದಲ್ಲಿ ಈ ಕೆಳಕಂಡಂತೆ ನಡೆಸಲಾಗಿದ್ದು, ಒಟ್ಟು 1000 ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದಿದ್ದಾರೆ:

ಕ್ರ. ಸಂ.	ಕಾರ್ಯಕ್ರಮ	ದಿನಾಂಕ	ಸ್ಥಳ (ಸಂಸ್ಥೆಯ ಹೆಸರು)
1	ಅಂತಾರಾಷ್ಟ್ರೀಯ ಜೀವ ವೈವಿಧ್ಯತೆ ದಿನ	22.05.2018	ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
2	ವಿಶ್ವ ಸಾಗರಗಳ ದಿನ	08.06.2018	ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

3	ವಿಶ್ವ ಓಝೋನ್ ದಿನ	16.09.2018	ಭಾರತಿ ಕಾಲೇಜು, ಭಾರತೀನಗರ, ಮಂಡ್ಯ ಜಿಲ್ಲೆ
4	ಶಾಂತಿ ಮತ್ತು ಅಭಿವೃದ್ಧಿಗೆ ವಿಶ್ವ ವಿಜ್ಞಾನ ದಿನ	13.11.2018	ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
5	ವಿಶ್ವ ಜೌಗುದಿನ	02.02.2019	ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು
6	ರಾಷ್ಟ್ರೀಯ ವಿಜ್ಞಾನ ದಿನ	28.02.2019	ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
7	ವಿಶ್ವ ಮಹಿಳಾ ದಿನ	08.03.2019	ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜು, ಹೊಳೆನರಸೀಪುರ, ಹಾಸನ

ಚಿತ್ರ 7: ಅಕಾಡೆಮಿಯ ಕಛೇರಿಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ

ಚಿತ್ರ 8: ಅಕಾಡೆಮಿಯ ಕಛೇರಿಯಲ್ಲಿ ವಿಶ್ವ ಸಾಗರಗಳ ದಿನಾಚರಣೆ

ಚಿತ್ರ ೨: ಭಾರತೀ ಕಾಲೇಜು, ಭಾರತೀನಗರ, ಮಂಡ್ಯ ಜಿಲ್ಲೆ ಇವರ ಸಹಯೋಗದಲ್ಲಿ ವಿಶ್ವ ಓಝೋನ್ ದಿನಾಚರಣೆ

6. ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ ವಿಶೇಷ ಕಾರ್ಯಾಗಾರ

ಸ್ನಾತಕೋತ್ತರ ವಿದ್ಯಾರ್ಥಿಗಳು ಆಧುನಿಕ ವೈಜ್ಞಾನಿಕ ಸಂಶೋಧನೆಯ ಬಗ್ಗೆ ತಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತಮ್ಮ ವೃತ್ತಿ ಜೀವನವನ್ನು ಕಂಡುಕೊಳ್ಳಲು ಉತ್ತೇಜಿಸಲು ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ವಿಶೇಷ ಕಾರ್ಯಾಗಾರಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಯಶಸ್ವಿಯಾಗಿ ನಡೆಸಲಾಯಿತು:

ಕ್ರ. ಸಂ.	ವಿಶ್ವವಿದ್ಯಾನಿಲಯ/ಕಾಲೇಜು/ಸಂಸ್ಥೆ	ವಿಷಯ	ದಿನಾಂಕ
1	ಕೆ. ಎಸ್. ಹೆಗ್ಡೆ ವೈದ್ಯಕೀಯ ಅಕಾಡೆಮಿ, ದೇರಲಕಟ್ಟೆ	ಜೀವ ರಸಾಯನ ವಿಜ್ಞಾನ	ಆಗಸ್ಟ್ 24-25, 2018
2	ಜೈನ್ ವಿಶ್ವವಿದ್ಯಾಲಯ, ಬೆಂಗಳೂರು	ನ್ಯಾನೊ ತಂತ್ರಜ್ಞಾನ	ಆಗಸ್ಟ್ 30-31, 2018
3	ಎಂ. ಎಸ್. ರಾಮಯ್ಯ ವಿಶ್ವವಿದ್ಯಾಲಯ, ಬೆಂಗಳೂರು	ಇಂಜಿನಿಯರಿಂಗ್	ಸೆಪ್ಟೆಂಬರ್ 24-25, 2018
4	ಮಂಗಳೂರು ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ & ಇಂಜಿನಿಯರಿಂಗ್	ಇಂಜಿನಿಯರಿಂಗ್	ಸೆಪ್ಟೆಂಬರ್ 28-29, 2018
5	ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು	ಗಣಿತ	ಅಕ್ಟೋಬರ್ 05-06, 2018
6	ಕೆ. ಎಲ್. ಇ. ಕಾಲೇಜ್ ಆಫ್ ಫಾರ್ಮಸಿ, ಬೆಳಗಾವಿ	ಔಷಧ ವಿಜ್ಞಾನ	ಅಕ್ಟೋಬರ್ 15-16, 2018
7	ಎಸ್. ಬಿ. ಆರ್. ಆರ್. ಮಹಾಜನ ಕಾಲೇಜು, ಮೈಸೂರು	ಜೀವ ವಿಜ್ಞಾನ	ಅಕ್ಟೋಬರ್ 17-18, 2018
8	ಗುಲ್ಬರ್ಗ ವಿಶ್ವವಿದ್ಯಾಲಯ, ಕಲಬುರ್ಗಿ	ಗಣಿತ	ಅಕ್ಟೋಬರ್ 30-31, 2018
9	ಸರ್ಕಾರಿ ವಿಜ್ಞಾನ ಕಾಲೇಜು, ಬೆಂಗಳೂರು	ರಸಾಯನ ವಿಜ್ಞಾನ	ಅಕ್ಟೋಬರ್ 30-31, 2018

10	ಆಚಾರ್ಯ ಇನ್ಸ್ಟಿಟ್ಯೂಟ್ ಆಫ್ ಗ್ರಾಜ್ಯೂಟ ಸ್ಟೇಡೀಸ್, ಬೆಂಗಳೂರು	ಗಣಿತ	ನವೆಂಬರ್ 16–17, 2018
11	ಕ್ರೈಸ್ಟ್ ವಿಶ್ವವಿದ್ಯಾಲಯ, ಬೆಂಗಳೂರು	ರಸಾಯನ ವಿಜ್ಞಾನ	ನವೆಂಬರ್ 27–28, 2018
12	ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ	ಸೂಕ್ಷ್ಮ ಜೀವಿ ವಿಜ್ಞಾನ	ನವೆಂಬರ್ 28–29, 2018
13	ಸರ್ಕಾರಿ ಆರ್ಯುವೇದ ಕಾಲೇಜು, ಬೆಂಗಳೂರು	ಆರ್ಯುವೇದ ವಿಜ್ಞಾನ	ನವೆಂಬರ್ 29–30, 2018
14	ತುಮಕೂರು ವಿಶ್ವವಿದ್ಯಾಲಯ	ರಸಾಯನ ವಿಜ್ಞಾನ	ಡಿಸೆಂಬರ್ 03–04, 2018
15	ಮೀನುಗಾರಿಕೆ ಮಹಾವಿದ್ಯಾಲಯ, ಮಂಗಳೂರು	ಮೀನುಗಾರಿಕಾ ವಿಜ್ಞಾನ	ಜನವರಿ 28–29, 2019
16	ಎಸ್.ಐ. ಆರ್ಟ್ಸ್ & ಕೆ.ಸಿ.ಪಿ. ಸೈನ್ಸ್ ಕಾಲೇಜು, ವಿಜಯಪುರ	ಭೌತ ವಿಜ್ಞಾನ	ಫೆಬ್ರವರಿ 21–22, 2019
17	ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ	ಜೈವಿಕ ತಂತ್ರಜ್ಞಾನ	ಮಾರ್ಚ್ 06–08, 2019
18	ಕೃಷ್ಣ ದೇವರಾಯ ವಿಶ್ವವಿದ್ಯಾನಿಲಯ, ಬಳ್ಳಾರಿ	ರಸಾಯನ ವಿಜ್ಞಾನ	ಮಾರ್ಚ್ 15–16, 2019
19	ಸೆಂಟರ್ ಫಾರ್ ನ್ಯಾನೊ ಅಂಡ್ ಸಾಫ್ಟ್ ಮ್ಯಾಟರ್ ಸೈನ್ಸ್, ಬೆಂಗಳೂರು	ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನ	ಮಾರ್ಚ್ 25–27, 2019
20	ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ	ಜೀವ ವಿಜ್ಞಾನ	ಮಾರ್ಚ್ 29–30, 2019

ಪ್ರತಿ ವಿಶೇಷ ಉಪನ್ಯಾಸ ಮಾಲೆ ಕಾರ್ಯಕ್ರಮವನ್ನು 2–3 ದಿನಗಳ ಕಾಲ ನಡೆಸಲಾಗಿದ್ದು, ಕಾರ್ಯಕ್ರಮದ ಕೊನೆಯಲ್ಲಿ ಉಪನ್ಯಾಸಗಳಿಗೆ ಅನುಗುಣವಾಗಿ ವಿದ್ಯಾರ್ಥಿಗಳಿಗೆ ಬಹು ಆಯ್ಕೆ ಪ್ರಶ್ನೆಗಳನ್ನೊಳಗೊಂಡ ಪರೀಕ್ಷೆಯನ್ನು ನಡೆಸಿ ಅತಿ ಹೆಚ್ಚು ಅಂಕಗಳನ್ನು ಗಳಿಸಿ ಮೊದಲ 3 ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಅನುಕ್ರಮವಾಗಿ ರೂ. 10,000/–; ರೂ. 6,000/– ಮತ್ತು ರೂ. 4,000/– ಗಳ ನಗದು ಬಹುಮಾನಗಳನ್ನು ನೀಡಲಾಯಿತು. 20 ಕಾರ್ಯಕ್ರಮಗಳಿಂದ ಒಟ್ಟು 2800 ವಿದ್ಯಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದಿದ್ದಾರೆ.

ಚಿತ್ರ 10: ಜೈನ್ ವಿಶ್ವವಿದ್ಯಾಲಯ, ಬೆಂಗಳೂರು ಇವರ ಸಹಯೋಗದಲ್ಲಿ ನ್ಯಾನೋ ತಂತ್ರಜ್ಞಾನ ವಿಶೇಷ ಕಾರ್ಯಾಗಾರ

ಚಿತ್ರ 11: ರಾಮಯ್ಯ ವಿಶ್ವವಿದ್ಯಾಲಯ, ಬೆಂಗಳೂರು ಇವರ ಸಹಯೋಗದಲ್ಲಿ ವಿಶೇಷ ಕಾರ್ಯಾಗಾರ

ಚಿತ್ರ 12: ಎಸ್. ಬಿ. ಆರ್. ಆರ್. ಮಹಾಜನ ಕಾಲೇಜು, ಮೈಸೂರು ಇವರ ಸಹಯೋಗದಲ್ಲಿ ಜೀವ ವಿಜ್ಞಾನ ವಿಶೇಷ ಕಾರ್ಯಾಗಾರ

ಚಿತ್ರ 13: ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ ಇವರ ಸಹಯೋಗದಲ್ಲಿ ಜೈವಿಕ ತಂತ್ರಜ್ಞಾನ ವಿಶೇಷ ಕಾರ್ಯಾಗಾರ

ಚಿತ್ರ 14: ಸೆಂಟರ್ ಫಾರ್ ನ್ಯಾನೊ ಅಂಡ್ ಸಾಫ್ಟ್ ಮ್ಯಾಟರ್ ಸೈನ್ಸ್, ಐ.ಐ.ಎಸ್ಸಿ. ಇವರ ಸಹಯೋಗದಲ್ಲಿ ನ್ಯಾನೋ ವಿಜ್ಞಾನ ಮತ್ತು ತಂತ್ರಜ್ಞಾನ ವಿಶೇಷ ಉಪನ್ಯಾಸ ಮಾಲೆ

ಚಿತ್ರ 15: ಅಕಾಡೆಮಿ ಕಛೇರಿಯಲ್ಲಿ ಜೀವ ವಿಜ್ಞಾನ ವಿಶೇಷ ಕಾರ್ಯಾಗಾರ

7. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕಾರ್ಯಕ್ರಮಗಳು

ಸ್ಟಿಂಗ್ 2018–19 : ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಆವಿಷ್ಕಾರಕ ಮನೋಭಾವನೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಸಲುವಾಗಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ 2019ರ ಫೆಬ್ರವರಿ 24 ರಂದು ವಿಜ್ಞಾನ ಮಾಡಲ್ ಪ್ರದರ್ಶನ ಸ್ಪರ್ಧೆಯನ್ನು ಎಗ್ಟ್–ಹೆಡ್ಸ್ ಪ್ರೈ. ಲಿ., ಬೆಂಗಳೂರು ಇವರ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು.

ಚಿತ್ರ 16: ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ವಿಜ್ಞಾನ ಪ್ರಾತ್ಯಕ್ಷಿಕೆ ವಸ್ತು ಪ್ರದರ್ಶನ ಕಾರ್ಯಕ್ರಮ

ಸೈನ್ಸ್ ಕ್ಯಾಸ್ಕೇಡ್ : ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಪರಿಕಲ್ಪನೆಗಳ ಬಗ್ಗೆ ಅರಿವು ಮೂಡಿಸುವ ದೃಷ್ಟಿಯಿಂದ ಸೈನ್ಸ್ ಕ್ಯಾಸ್ಕೇಡ್ ಸ್ಪರ್ಧೆಯನ್ನು 2019ರ ಜನವರಿ 20 ರಂದು ಪ್ರಯೋಗ, ಬೆಂಗಳೂರು ಇವರ ಸಹಯೋಗದಲ್ಲಿ ಏರ್ಪಡಿಸಲಾಗಿತ್ತು.

8. ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳು

ವಿಜ್ಞಾನ ಮತ್ತು ತಂತ್ರಜ್ಞಾನ ಮುಂಚೂಣಿ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸುವ ಮೂಲಕ ವಿದ್ಯಾರ್ಥಿಗಳು, ಯುವ ಸಂಶೋಧಕರು ಮತ್ತು ಬೋಧಕರು ತಮ್ಮ ಜ್ಞಾನದ ಪರಿಧಿಯನ್ನು ವಿಸ್ತರಿಸಿಕೊಳ್ಳಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಈ ಕಾರ್ಯಕ್ರಮವನ್ನು ನಡೆಸಲಾಯಿತು. ಆರ್ಥಿಕ ವರ್ಷ 2018–19ನೇ ಸಾಲಿನಲ್ಲಿ ಈ ಕೆಳಕಂಡ 11 ಕಾರ್ಯಕ್ರಮಗಳನ್ನು ನಡೆಸಲಾಗಿದ್ದು, ಒಟ್ಟು 830 ಶಿಬಿರಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದಿದ್ದಾರೆ:

ಕ್ರ. ಸಂ.	ಕಾರ್ಯಕ್ರಮ	ದಿನಾಂಕ	ಸ್ಥಳ	ಫಲಾನುಭವಿಗಳು	ಶಿಬಿರಾರ್ಥಿಗಳ ಸಂಖ್ಯೆ
1	ಯೋಜನಾ ನಿರ್ವಹಣೆ	ಏಪ್ರಿಲ್ 25–26, 2018	ಅಕಾಡೆಮಿ ಕಛೇರಿ	ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ವಿ. ಜಿ. ಎಸ್. ಟಿ., ಸಂಸ್ಥೆಯಿಂದ ಅನುದಾನ ಪಡೆದ ಸಂಸ್ಥೆಗಳ ಪ್ರತಿನಿಧಿಗಳು	45
2	ಸಂಶೋಧನಾ ಕಾರ್ಯದಲ್ಲಿ ಅಂಕಿ ಅಂಶಗಳ ಪ್ರಾಮುಖ್ಯತೆ	ಜೂನ್ 20–22, 2018	ಅಕಾಡೆಮಿ ಕಛೇರಿ	ವಿಜ್ಞಾನ ಪದವಿ ಮತ್ತು ಇಂಜಿನಿಯರಿಂಗ್ ಸಂಶೋಧನಾ ವಿದ್ಯಾರ್ಥಿಗಳು	60
3	ಸಂಶೋಧನಾ ವಿಧಾನ	ಜುಲೈ 10–12, 2018	ಅಕಾಡೆಮಿ ಕಛೇರಿ	ವಿಜ್ಞಾನ ಪದವಿ ಮತ್ತು ಇಂಜಿನಿಯರಿಂಗ್ ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು	70
4	ವಿಜ್ಞಾನ ಸಂವಹನ	ಆಗಸ್ಟ್ 01–03, 2018	ಅಕಾಡೆಮಿ ಕಛೇರಿ	ಪತ್ರಿಕೋದ್ಯಮ ವಿದ್ಯಾರ್ಥಿಗಳು ಮತ್ತು ಯುವ ಪತ್ರಿಕಾ ವರದಿಗಾರರು	75
5	ಭೌಗೋಳಿಕ ಮಾಹಿತಿ ವ್ಯವಸ್ಥೆ	ಆಗಸ್ಟ್ 07–09, 2018	ಅಕಾಡೆಮಿ ಕಛೇರಿ	ವಿಜ್ಞಾನ ಪದವಿ ಮತ್ತು ಇಂಜಿನಿಯರಿಂಗ್ ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು	115
6	ವಿಜ್ಞಾನ ಸಂವಹನ	ಸೆಪ್ಟೆಂಬರ್ 27–28, 2018	ಅಕಾಡೆಮಿ ಕಛೇರಿ	ಪತ್ರಿಕೋದ್ಯಮ ವಿದ್ಯಾರ್ಥಿಗಳು ಮತ್ತು ಯುವ ಪತ್ರಿಕಾ ವರದಿಗಾರರು	80
7	ಸಂಶೋಧನಾ ವಿಧಾನ ಮತ್ತು ದತ್ತಾಂಶ ವಿಶ್ಲೇಷಣೆಯಲ್ಲಿ ಸಂಖ್ಯಾ ಶಾಸ್ತ್ರದ ಸಾಧನಗಳು	ಜನವರಿ 02–04, 2019	ಅಕಾಡೆಮಿ ಕಛೇರಿ	ವಿಜ್ಞಾನ ಪದವಿ ಮತ್ತು ಇಂಜಿನಿಯರಿಂಗ್ ಅಧ್ಯಾಪಕರು ಹಾಗೂ ಸಂಶೋಧನಾ ವಿದ್ಯಾರ್ಥಿಗಳು	110
8	ಫರ್ಮೆಂಟೇಶನ್ ಪ್ರೊಸಸ್ ಅಂಡ್ ಲಿಕ್ವಿಡ್ ಕ್ರೊಮೊಟೊಗ್ರಫಿ	ಮಾರ್ಚ್ 13–14, 2019	ಜೆ. ಎಸ್. ಎಸ್. ಮಹಿಳಾ ಕಾಲೇಜ್, ಊಟಿ ರಸ್ತೆ, ಮೈಸೂರು	ವಿಜ್ಞಾನ ಪದವಿ ಮತ್ತು ಸಂಶೋಧನಾ ವಿದ್ಯಾರ್ಥಿಗಳು	80
9	ಪರಿಸರ ಪರಿಣಾಮ ಮೌಲ್ಯಮಾಪನ	ಫೆಬ್ರವರಿ 07–09, 2019	ಅಕಾಡೆಮಿ ಕಛೇರಿ	ವಿಜ್ಞಾನ ಪದವಿ, ಸ್ನಾತಕೋತ್ತರ ಪದವಿ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು	55
10	ಪ್ರಾಬ್ಲಮ್ ಸಾಲ್ವಿಂಗ್ ಇನ್ ಪೈತಾನ್	ಮಾರ್ಚ್ 16, 2019	ಅಕಾಡೆಮಿ ಕಛೇರಿ	ಇಂಜಿನಿಯರಿಂಗ್ ವಿದ್ಯಾರ್ಥಿಗಳು ಮತ್ತು ವೃತ್ತಿಪರರು	60
11	ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಟೊಟಲ್ ಸ್ಟೇಷನ್ ಮತ್ತು ಅದರ ಅನ್ವಯಿಕಗಳು	ಮಾರ್ಚ್ 27–28, 2019	ಎ. ಟಿ. ಎಂ. ಇ. ಕಾಲೇಜ್, ಮೈಸೂರು	ಇಂಜಿನಿಯರಿಂಗ್ ವಿದ್ಯಾರ್ಥಿಗಳು	80

ಚಿತ್ರ 17: ಯೋಜನಾ ನಿರ್ವಹಣೆ ಕೋರ್ಸ್

ಚಿತ್ರ 18: ಸಂಶೋಧನಾ ವಿಧಾನ ಕೋರ್ಸ್

ಚಿತ್ರ 19: ವಿಜ್ಞಾನ ಸಂವಹನ ಕಾರ್ಯಾಗಾರ

ಚಿತ್ರ 20: ಪೈತಾನ್ ತರಬೇತಿ

೨. ವಿಶೇಷ ಚೇತನರಿಗೆ ವಿಜ್ಞಾನ ಕಾರ್ಯಕ್ರಮಗಳು

ವಿಶೇಷ ಚೇತನ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಒಂದು ವೇದಿಕೆಯನ್ನು ಕಲ್ಪಿಸಲು ಹಾಗೂ ಅವರಲ್ಲಿ ಆತ್ಮವಿಶ್ವಾಸ ಮತ್ತು ಮನೋಸ್ಥೈರ್ಯವನ್ನು ತಂಬಲು ಅಕಾಡೆಮಿಯು ವಿಶೇಷ ಚೇತನರಿಗೆ ವಿಜ್ಞಾನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಯೋಜಿಸಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಎರಡು ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ನಡೆಸಲಾಗಿದೆ:

ಕ್ರ. ಸಂ.	ಕಾರ್ಯಕ್ರಮ	ದಿನಾಂಕ	ಸಹಯೋಗ
1	ವಿಜ್ಞಾನ ಮತ್ತು ತಂತ್ರಜ್ಞಾನ ವಸ್ತು ಪ್ರದರ್ಶನ ಸ್ಪರ್ಧೆ	29-10-2018	ಜೆ.ಎಸ್.ಎಸ್ ವಿಶೇಷ ಚೇತನರ ಪಾಲಿಟೆಕ್ನಿಕ್, ಮೈಸೂರು
2	ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮ	15-12-2018	ಸಮರ್ಥನಂ ಟ್ರಸ್ಟ್, ಬೆಂಗಳೂರು

Fig. 21: Science Program for Specially Abled Students

10. ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ವೈಜ್ಞಾನಿಕ ಮಾದರಿಗಳ ವಸ್ತು ಪ್ರದರ್ಶನ ಸ್ಪರ್ಧೆ

ಅಕಾಡೆಮಿಯು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ತಾಂತ್ರಿಕ ಯೋಜನಾ ವಸ್ತು ಪ್ರದರ್ಶನ ಸ್ಪರ್ಧೆಯನ್ನು 2019ರ ಮಾರ್ಚ್ 12 ಮತ್ತು 13 ರಂದು ಬೆಂಗಳೂರಿನಲ್ಲಿ ಶ್ರೀ ವೆಂಕಟೇಶ್ವರ ತಾಂತ್ರಿಕ ಮಹಾವಿದ್ಯಾಲಯದ ಸಹಯೋಗದೊಂದಿಗೆ ಯಶಸ್ವಿಯಾಗಿ ಆಯೋಜಿಸಲಾಯಿತು. ಸದರಿ ಸ್ಪರ್ಧೆಗೆ ರಾಜ್ಯದ ವಿವಿಧ ಇಂಜಿನಿಯರಿಂಗ್ ಕಾಲೇಜುಗಳ ಸುಮಾರು 300 ಕ್ಕೂ ಹೆಚ್ಚು ವಿದ್ಯಾರ್ಥಿಗಳು ತಮ್ಮ ವೈಜ್ಞಾನಿಕ ಮಾದರಿಗಳ ಸಂಕ್ಷಿಪ್ತ ಸಾರಾಂಶಗಳನ್ನು ಕೆಳಕಂಡ ವಿಷಯಗಳಲ್ಲಿ ಸಲ್ಲಿಸಿದರು.

- ಆಟೋಮೇಷನ್ & ರೋಬೋಟಿಕ್ಸ್ ಅನ್ವಯಗಳು
- ನವೀಕರಿಸಬಹುದಾದ ಇಂಧನ ಮೂಲಗಳು
- ಉತ್ಪಾದನೆ ಮತ್ತು ಸುಸ್ಥಿರ ಇಂಜಿನಿಯರಿಂಗ್ ಸಾಮಗ್ರಿಗಳಲ್ಲಿ ಆಧುನಿಕ ಪ್ರವೃತ್ತಿ
- ನೆಟ್‌ವರ್ಕ್ ಭದ್ರತೆ ಮತ್ತು ಐ.ಓ.ಟಿ. ಅನ್ವಯಿಕಗಳು
- ಪರಿಸರ ಸುಸ್ಥಿರತೆ ಮತ್ತು ಹವಾಮಾನ ಬದಲಾವಣೆ
- ಮೂಲ ವಿಜ್ಞಾನ ಮತ್ತು ಬಯೋಮೆಡಿಕಲ್ ಅಪ್ಲಿಕೇಶನ್ಸ್

ಅವುಗಳಲ್ಲಿ 103 ಮಾದರಿಗಳನ್ನು ಸ್ಪರ್ಧೆಗೆ ಭಾಗವಹಿಸಲು ಅನುವು ಮಾಡಿಕೊಡಲಾಗಿತ್ತು.

ಚಿತ್ರ 22: ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ವೈಜ್ಞಾನಿಕ ಮಾದರಿಗಳ ವಸ್ತು ಪ್ರದರ್ಶನ ಸ್ಪರ್ಧೆ

11. ಮುಕ್ತ ಉಪನ್ಯಾಸ ಮಾಲೆ ಕಾರ್ಯಕ್ರಮ

ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಹೊಸ ಆಯಾಮಗಳಲ್ಲಿ ಉನ್ನತ ಶಿಕ್ಷಣ ಮತ್ತು ಸಂಶೋಧನೆಯನ್ನು ಕೈಗೊಳ್ಳಲು ಆಸಕ್ತಿ ಬೆಳೆಸಿ, ಉತ್ತೇಜಿಸಲು ರಾಜ್ಯದ ಖ್ಯಾತ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳ ಶ್ರೇಷ್ಠ ವಿಜ್ಞಾನಿಗಳು ಮತ್ತು ಹೆಸರಾಂತ ತಜ್ಞರನ್ನು ಆಹ್ವಾನಿಸಿ ಉಪನ್ಯಾಸಗಳನ್ನು ಏರ್ಪಡಿಸಲಾಯಿತು. ಪ್ರಸ್ತುತ ಆರ್ಥಿಕ ವರ್ಷದಲ್ಲಿ 5 ಕಾರ್ಯಕ್ರಮಗಳನ್ನು ಈ ಕೆಳಕಂಡಂತೆ ನಡೆಸಲಾಗಿದೆ:

ಕ್ರ. ಸಂ.	ಕಾರ್ಯಕ್ರಮ	ದಿನಾಂಕ	ಸ್ಥಳ/ ಸಹಯೋಗ
1	ಗಣಕ ಯಂತ್ರದ ಮೂಲಕ ಭೌತ ವಿಜ್ಞಾನದ ಪ್ರಯೋಗಗಳು : ಕಾರ್ಯಾಗಾರ	ಜುಲೈ 9–11, 2018	ಆರ್ ವಿ ಇಂಜಿನಿಯರಿಂಗ್ ಕಾಲೇಜು
2	ಗಣಿತದಲ್ಲಿ ಇತ್ತೀಚಿನ ಬೆಳವಣಿಗೆಗಳು ಮತ್ತು ಪರಿಶೋಧನೆಗಳು	ಅಕ್ಟೋಬರ್ 4, 2018	ನ್ಯಾಷನಲ್ ವಿಜ್ಞಾನ ಪದವಿ ಕಾಲೇಜು, ಜಯನಗರ, ಬೆಂಗಳೂರು
3	ವಿಜ್ಞಾನ ಶಿಬಿರ	ಅಕ್ಟೋಬರ್ 20 – 23, 2018	ಸಾಗರ ಸೈನ್ಸ್ ಫೋರಂ, ಸಾಗರ, ಶಿವಮೊಗ್ಗ
4	ಜೀವ ವೈವಿಧ್ಯತೆ : ನಿರ್ವಹಣೆ ಸಮಸ್ಯೆಗಳು ಮತ್ತು ಸಂರಕ್ಷಣೆ ತಂತ್ರಗಾರಿಕೆ	ಡಿಸೆಂಬರ್ 21–22, 2018	ಗೋಖಲೆ, ಸೆಂಟನರಿ ಕಾಲೇಜು, ಅಂಕೋಲ
5	ಗಣಿತ ಕಾರ್ಯಾಗಾರ	ಡಿಸೆಂಬರ್ 27, 2018	ಪೂರ್ಣಪ್ರಜ್ಞ ಕಾಲೇಜು, ಉಡುಪಿ

ಚಿತ್ರ 23: ಗಣಕ ಯಂತ್ರದ ಮೂಲಕ ಭೌತ ವಿಜ್ಞಾನದ ಪ್ರಯೋಗಗಳು : ಕಾರ್ಯಾಗಾರ

ಚಿತ್ರ 24: ಸಾಗರದಲ್ಲಿ ವಿಜ್ಞಾನ ಶಿಬಿರ

12. ಪದವಿ ಪೂರ್ವ ವಿಜ್ಞಾನ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಕನ್ನಡ ಪದಕೋಶ

ಪ್ರೌಢಶಾಲಾ ವಿದ್ಯಾಭ್ಯಾಸವನ್ನು ಕನ್ನಡ ಮಾಧ್ಯಮದಲ್ಲಿ ಪೂರ್ಣಗೊಳಿಸಿ, ಪದವಿ ಪೂರ್ವ ವಿದ್ಯಾಭ್ಯಾಸಕ್ಕಾಗಿ ಆಂಗ್ಲ ಮಾಧ್ಯಮಕ್ಕೆ ಸೇರ್ಪಡೆಗೊಳ್ಳುವ ವಿದ್ಯಾರ್ಥಿಗಳಿಗೆ ಇಂಗ್ಲೀಷ್ ಪದಗಳಿಗೆ ಕನ್ನಡ ತತ್ಸಮ ಪದಗಳನ್ನು ನೀಡಿ ಸುಲಭವಾಗಿ ಅರ್ಥ ಮಾಡಿಕೊಳ್ಳಲು ಅನುವು ಮಾಡಿಕೊಡುವ ಉದ್ದೇಶದಿಂದ ಅಕಾಡೆಮಿಯ ವತಿಯಿಂದ ಇಂಗ್ಲೀಷ್–ಕನ್ನಡ ಪದಕೋಶವನ್ನು ಹೊತರಲಾಗಿದೆ. ಭೌತ ವಿಜ್ಞಾನ, ಗಣಿತ, ರಸಾಯನ ವಿಜ್ಞಾನ ಮತ್ತು ಜೀವ ವಿಜ್ಞಾನಕ್ಕೆ ಸಂಬಂಧಿಸಿದ ಸುಮಾರು ೬೦೦೦ಕ್ಕೂ ಹೆಚ್ಚು ಇಂಗ್ಲೀಷ್ ವೈಜ್ಞಾನಿಕ ಪದಗಳಿಗೆ ಕನ್ನಡದಲ್ಲಿ ಸಮಾನಾರ್ಥ ಪದಗಳನ್ನು ನೀಡಲಾಗಿದೆ. ಈ ಪದಕೋಶವು ವಿದ್ಯಾರ್ಥಿಗಳಗಲ್ಲದೆ, ವಿಜ್ಞಾನ ಬರಹಗಾರರಿಗೂ ಉಪಯುಕ್ತವಾಗುವಂತೆ ರೂಪಿಸಲಾಗಿದೆ.

ಚಿತ್ರ 25: ವಿಜ್ಞಾನ ಪದಕೋಶ ಬಿಡುಗಡೆ ಸಮಾರಂಭ

13. ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ (ಗಾಲಿಗಳ ಮೇಲೆ ವಿಜ್ಞಾನ)

ಪ್ರೌಢಶಾಲಾ ವಿದ್ಯಾರ್ಥಿಗಳು ಪಠ್ಯಕ್ರಮದಲ್ಲಿರುವ ಕೆಲವು ಪ್ರಯೋಗಗಳನ್ನು ತಾವೇ ಮಾಡಿ ಕಲಿಯಲು ಅನುವಾಗುವಂತೆ ಅಕಾಡೆಮಿಯು, ಸುಪ್ರಜಾ ಫೌಂಡೇಶನ್ ರವರ ಸಹಯೋಗದಲ್ಲಿ ಸಂಚಾರಿ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮವನ್ನು ನಡೆಸಲಾಗಿದ್ದು, ಸಂಚಾರಿ ವಾಹನವು ಶಿರಸಿ ಮತ್ತು ಸುತ್ತ ಮುತ್ತಲಿನ ತಾಲ್ಲೂಕುಗಳ ಗ್ರಾಮೀಣ ಭಾಗದ ಆಯ್ದ ಪ್ರೌಢಶಾಲೆಗಳಿಗೆ ಭೇಟಿ ನೀಡಿರುತ್ತದೆ.

ಚಿತ್ರ 26: ಗಾಲಿಗಳ ಮೇಲೆ ವಿಜ್ಞಾನ

14. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ನೂತನ ಕಟ್ಟಡದ ಉದ್ಘಾಟನೆ

ಬೆಂಗಳೂರಿನ ಜಿ.ಕೆ.ವಿ.ಕೆ ಆವರಣದಲ್ಲಿ ತೋಟಗಾರಿಕಾ ವಿಜ್ಞಾನಗಳ ಕಾಲೇಜಿನ ಸಮೀಪ ನಿರ್ಮಿಸಲಾಗಿರುವ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ನೂತನ ಕಟ್ಟಡ "ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ"ವನ್ನು ಉದ್ಘಾಟಿಸಲಾಯಿತು. ಸದರಿ ಕಟ್ಟಡವನ್ನು ಸನ್ಮಾನ್ಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಕ್ಕರೆ ಸಚಿವರಾದ ಶ್ರೀ ಕೆ. ಜೆ. ಜಾರ್ಜ್ ಅವರು ಅಕ್ಟೋಬರ್ 10, 2018 ರಂದು ಉದ್ಘಾಟಿಸಿದರು. ಈ ಸಮಾರಂಭದ ವಿಶೇಷ ಅತಿಥಿಗಳಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಪೂಜ್ಯ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮಲ್ಲಿಕಾರ್ಜುನ್ ಅವರು ಭಾಗವಹಿಸಿದ್ದರು. ಸಮಾರಂಭದ ಅಧ್ಯಕ್ಷತೆಯನ್ನು ಯಲಹಂಕ ವಿಧಾನ ಸಭಾ ಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಎಸ್. ಆರ್. ವಿಶ್ವನಾಥ್ ಅವರು ವಹಿಸಿದ್ದರು. ಅಕಾಡೆಮಿಯ ಅಧ್ಯಕ್ಷರಾದ ಡಾ. ಎಸ್. ಕೆ. ಶಿವಕುಮಾರ್‌ರವರು, ವಿಧಾನ ಪರಿಷತ್ತಿನ ಮಾನ್ಯ ಶಾಸಕರಾದ ಪ್ರೊ. ಎಸ್. ವಿ. ಸಂಕನೂರ್ ಮತ್ತು ಶ್ರೀ ಟಿ. ಎ. ಶರವಣರವರು ಹಾಗೂ ಬೆಂಗಳೂರು ಮಹಾನಗರ ಪಾಲಿಕೆ ಸದಸ್ಯರಾದ ಶ್ರೀಮತಿ ಎಂ. ನೇತ್ರಪಲ್ಲವಿ ಮತ್ತು ಶ್ರೀಮತಿ ಹೆಚ್. ಕುಸುಮ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ತಾಂತ್ರಿಕ ನಿರ್ದೇಶಕರು ಹಾಗೂ ಅಕಾಡೆಮಿಯ ಸದಸ್ಯ ಕಾರ್ಯದರ್ಶಿಗಳಾದ ಡಾ. ಹೆಚ್. ಹೊನ್ನೇಗೌಡರವರು, ಬಾಲಗಕೋಟೆ ತೋಟಗಾರಿಕಾ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ. ಕೆ. ಎಂ. ಇಂದ್ರೇಶ್‌ರವರು ಹಾಗೂ ಅಕಾಡೆಮಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಡಾ. ಎ. ಎಂ. ರಮೇಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಚಿತ್ರ 27: ಅಕಾಡೆಮಿ ಕಛೇರಿಯ ಉದ್ಘಾಟನೆ

ಈ ಉದ್ಘಾಟನಾ ಸಮಾರಂಭದ ದಿನದಂದು ವಿಜ್ಞಾನ ಪದವಿ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಕೆಳಕಂಡ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು:

- ವೈಜ್ಞಾನಿಕ ಮಾದರಿಗಳ ಪ್ರದರ್ಶನ
- ಚಿತ್ರಕಲೆ (ಪೈಂಟಿಂಗ್ ಮತ್ತು ಡ್ರಾಯಿಂಗ್ ಪ್ರತ್ಯೇಕವಾಗಿ)
- ವಿಜ್ಞಾನ ರಸಪ್ರಶ್ನೆ (ವಿಜ್ಞಾನ ಪದವಿ ಮತ್ತು ಇಂಜಿನಿಯರಿಂಗ್ ಪ್ರತ್ಯೇಕವಾಗಿ)

15. ವಿಜ್ಞಾನ, ತಂತ್ರಜ್ಞಾನ, ಕೃಷಿ & ವೈದ್ಯಕೀಯ ವಿಷಯಗಳ ಶ್ರೇಷ್ಠ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿ

ಕನ್ನಡದಲ್ಲಿ ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ಕ್ಷೇತ್ರಗಳ ಪುಸ್ತಕಗಳನ್ನು ಪ್ರಕಟಿಸಲು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಅಕಾಡೆಮಿಯು ಆಯ್ದ ಅತ್ಯುತ್ತಮವಾದ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿಯನ್ನು ನೀಡುತ್ತಿದೆ. 2018-'19ನೇ ಸಾಲಿನಲ್ಲಿ ಒಟ್ಟು 55 ಪುಸ್ತಕಗಳನ್ನು ಸಲ್ಲಿಸಿದ್ದು, ಅವುಗಳನ್ನು ಆಯಾ ಕ್ಷೇತ್ರದ ಪರಿಣತರಿಂದ ಮೌಲ್ಯಮಾಪನ ಮಾಡಿಸಲಾಗಿದೆ. ಆಯಾಯ ವಿಷಯದಲ್ಲಿ ಸಲ್ಲಿಕೆಯಾಗಿರುವ ಪುಸ್ತಕಗಳ ಸಂಖ್ಯೆಗನುಗುಣವಾಗಿ ಕೃಷಿ ಮತ್ತು ವಿಜ್ಞಾನ ವಿಷಯಗಳಲ್ಲಿ ತಲಾ ಒಂದು ಪ್ರಶಸ್ತಿ ಹಾಗೂ ವೈದ್ಯಕೀಯ ವಿಷಯದಲ್ಲಿ ಎರಡು ಪ್ರಶಸ್ತಿಗಳನ್ನು ನೀಡಲು ಆಯ್ಕೆ ಮಾಡಲಾಗಿದೆ. ತಂತ್ರಜ್ಞಾನ ವಿಷಯದಲ್ಲಿ ಎರಡು ಪುಸ್ತಕಗಳ ಅಂಕಗಳು ಬಹುತೇಕ ಸಮನಾಗಿದ್ದು, ಪ್ರಶಸ್ತಿಯನ್ನು ಈ ಎರಡು ಪುಸ್ತಕಗಳ ಲೇಖಕರಿಗೆ ಸಮಪಾಲಗಿ ಹಂಚಲು ನಿರ್ಧರಿಸಲಾಯಿತು. 2019ರ ಜೂನ್ ಮಾಹೆಯಲ್ಲಿ ಒಂದು ಸಮಾರಂಭವನ್ನು ಆಯೋಜಿಸಿ, ಆಯ್ಕೆಯಾದ ಪುಸ್ತಕಗಳ ಲೇಖಕರಿಗೆ ತಲಾ ರೂ. 25,000/- ನಗದು ಪುರಸ್ಕಾರ ಮತ್ತು ಪ್ರಶಸ್ತಿ ಪತ್ರ ನೀಡಿ ಸನ್ಮಾನಿಸಲಾಗುವುದು.

ಸಂಪರ್ಕಿಸಬೇಕಾದ ವಿಳಾಸ:

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

'ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ',

ಮೇ. ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡ ಬೆಟ್ಟಹಳ್ಳಿ ಬಡಾವಣೆ ಬಸ್ ನಿಲ್ದಾಣದ ಹತ್ತಿರ,

ವಿದ್ಯಾರಣ್ಯಪುರ ಅಂಚೆ, ಬೆಂಗಳೂರು – 560 097

ಫೋನ್/ಫ್ಯಾಕ್ಸ್ : 080-29721550; 080-29721549

ವಿ-ಅಂಚೆ : **ksta.gok@gmail.com** ಜಾಲತಾಣ : **www.kstacademy.in**